ಪರೀಕ್ಷಣೆ, ಪ್ರಯೋಗ, ಆಯ್ಕೆ, ಮುಂದಿನ ಹೆಜ್ಜೆಯ ನಿರ್ಣಯ ಅವನ ಹಾದಿಯಾಗಿದ್ದವು. ಈ ಕಾರಣದಿಂದಾಗಿಯೇ ನಾವು 'ಸಂಕ್ರಮಣ'ವನ್ನು ಸಂಪಾದಿಸುತ್ತಿದ್ದಾಗ ಅವನು ಮೊದಲು ಅನುವಾದ ಮಾಡಿದ, ಅನಂತರ ಕತೆಗಳತ್ತ ವಾಲಿದ, ಕತೆಗಳನ್ನು ಓದುತ್ತ ಕತೆಗಳ ವಿಮರ್ಶೆಗೆ ತೊಡಗಿದ. ಕವಿತೆ, ಕತೆ, ವಿಮರ್ಶೆಗಳ ಅಡಿಗಲ್ಲು ಇಟ್ಟುಕೊಂಡು ನಗುನಗುತ್ತಲೇ ಗಂಭೀರ ಪ್ರಕೃತಿಯ ಸಾಹಿತಿಯಾದ. ಆ ಸಂದರ್ಭದಲ್ಲಿಯೇ ಜಿ.ಎ. (ಗೋವಿಂದಪ್ಪ ಅಂದಾನೆಪ್ಪ) ಗಿರಡ್ಡಿಯವರ ಎಂದು ಇದ್ದ ತನ್ನ ಹೆಸರನ್ನು ಸಹ ನಿಧಾನವಾಗಿ ಬದಲಿಸಿಕೊಂಡ. ಗಿರಡ್ಡಿ ಗೋವಿಂದರಾಜ ಅವತರಿಸಿದ. ನಗುತ್ತಲೇ ನಗೆಯ ಹಿಂದಿನ ಎಂಥದೋ ನೋವನ್ನು ಹುಡುಕುತ್ತಿದ್ದನೇನೋ, ನಮಗೆ ತಿಳಿಯಲೇ ಇಲ್ಲ.

ನಾವು ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ ನಡೆದ ಒಂದು ಪ್ರಸಂಗ. ಆ ಕಾಲದಲ್ಲಿ ನಮ್ಮ ಕಾಲೇಜಿನಲ್ಲಿ ಸ್ಕೂಟರ್ ಇಟ್ಟುಕೊಂಡವರು ಇಬ್ಬರೇ. ಒಬ್ಬರು ಸಂಖ್ಯಾಶಾಸ್ತ್ರ ವಿಭಾಗದ ನಂಜುಂಡಸ್ವಾಮಿ, ಇನ್ನೊಬ್ಬರು ನಮ್ಮ ಗಿರಡ್ಡಿ. ಧಾರವಾಡದಲ್ಲಿ ತ್ರಿಲೋಚನಲಾಲ್ ಆ್ಯಂಡ್ ಕಂಪನಿಯವರು ಲ್ಯಾಂಬ್ರೆಟ್ಟಾ ಸ್ಕೂಟರ್ ಕೊಡುತ್ತಿದ್ದರು. ನಮ್ಮ ಗೆಳೆಯರಲ್ಲಿ ಶ್ರೀಮಂತ ಅಂದರೆ ಗಿರಡ್ಡಿನೇ. ಅವನು ಲ್ಯಾಂಬ್ರೆಟ್ಟಾ ಖರೀದಿಸಿ, ದಿನಾ ಒಳ್ಳೇ ಪೋಜ್‌ನಾಗಿ ಬರುತ್ತಿದ್ದ. ಒಂದು ಸಲ ಕಾಲೇಜಿನ ಗ್ಯಾದರಿಂಗ್ ಸಂದರ್ಭ. ನಮಗೆಲ್ಲ ಬೇರೆ ಬೇರೆ ಕಡೆ ಡ್ಯೂಟಿ ಹಾಕಲಾಗಿತ್ತು. ನನಗೆ ಕ್ಯಾಂಟೀನ್ ಡ್ಯೂಟಿ, ಗಿರಡ್ಡಿಗೆ ಕಾರ್ಯಕ್ರಮ ನಡೆಯುವಲ್ಲಿ ಸ್ಟೇಜ್ ಡ್ಯೂಟಿ. ಅವನು ತನ್ನ ಸ್ಕೂಟರನ್ನು ಕಾಲೇಜಿನ ಮುಂಭಾಗದಲ್ಲಿ ಇಟ್ಟಿದ್ದ. ರಾತ್ರಿ 10.30ರ ಸುಮಾರಿಗೆ ನಮ್ಮ ಕೆಲಸ ಮುಗಿಸಿಕೊಂಡು ಬಂದು ನೋಡಿದರೆ ಅಲ್ಲಿ ಅವನ ಸ್ಕೂಟರ್ ಇರಲೇ ಇಲ್ಲ. ಅತ್ತಿತ್ತ ಹುಡುಕಾಟ ನಡೆದಿತ್ತು. ನಾನೂ ಕ್ಯಾಂಟೀನ್ ಕೆಲಸ ಮುಗಿಸಿ ಅಲ್ಲಿಗೇ ಬಂದೆ. ಆಗ ಕಾಲೇಜು ಆವರಣದಲ್ಲಿ ಇನ್ನೂ ಕಾಡು–ಕಂಟಿ ಬಹಳವಿತ್ತು. ಎಲ್ಲ ಕಡೆ ಹುಡುಕಿದೆವು. ಅವನಂಥ ನಿರಾಳ ವ್ಯಕ್ತಿಯ ಗಾಡಿಯನ್ನು ಯಾರು ಕದ್ದಿರಬಹುದು? ಆ ಹೊತ್ತಿನಲ್ಲಿಯೂ ಶಾಂತ ಮೂರ್ತಿಯಂತೆ ನಿಂತಿದ್ದ ಗಿರಡ್ಡಿಯನ್ನು ನೋಡಿ ಆಶ್ಚರ್ಯವಾಯಿತು. 'ಹಿಂಗೆಂಗ ಶಾಂತ ಅದೀ?' ಅಂದೆ. "ಮತ್ತೇನು ಮಾಡಲಿ? ಅತ್ತರ ಹೊಯ್ಕೊಂಡರ ಸಿಗತೈತೇನು?" ಅಂದ. 'ಮುಂದ ಹೆಂಗ?' ಅಂದೆ. "ಒಯ್ದವರು ಕೊಡತಾರ ಬಿಡು" ಅಂದ. 'ಅಂದರ ಯಾರು ಕೊಡತಾರು?' ಕೇಳಿದೆ. "ಪೊಲೀಸರು!" ಅಂದ. 'ಅಂದರೇನೋ? ಪೊಲೀಸರು ಒಯ್ದಾರಂತೀ?' ಕೇಳಿದೆ. "ಮತ್ತ ಎಲ್ಲಾ ಕಡೆ ಕಾಯೂದು ಇಲ್ಲಿದ್ದ ಪೊಲೀಸರದ ಡ್ಯೂಟಿ ಇತ್ತ ಅಂದ ಮ್ಯಾಲ ಅವರ ಕೊಡತಾರು" ಅಂದ. ನಮಗೆಲ್ಲರಿಗೂ ಇದ್ದ ಚಿಂತೆ ತನಗೆ ಇಲ್ಲವೇ ಇಲ್ಲ ಎಂಬಂತೆ ಮಾತಾಡಿದ್ದ. ಧಾರವಾಡದಲ್ಲಿ ಗಾಡಿಯ ಕಳವಿನ ಇಂಥ ಪ್ರಸಂಗ ಮೊದಲ ಸಲ ನಡೆದಿತ್ತು. ಮರುದಿನ ಊರ ತುಂಬ ಗಿರಡ್ಡಿಯ ಗಾಡಿ ಕಳವಾದ ಸುದ್ದಿಯದೇ ಕಾರಭಾರ. ಮುಂದೆ ಎರಡನೇ ದಿನ ಗಿರಡ್ಡಿ ಹೇಳಿದಂತೆಯೇ ಆಯಿತು. ಕೀಲಿ ಮುರಿದು ಅವನ ಗಾಡಿಯನ್ನು ಕದ್ದು ಒಯ್ದವರು ಅಗ್ರಿಕಲ್ಚರ್ ಕಾಲೇಜಿನ ಹತ್ತಿರ ಬಿಟ್ಟು ಹೋಗಿದ್ದರಂತೆ. ಹುಡುಕಿದ ಪೊಲೀಸರು ಪದ್ಧತಿ ಪ್ರಕಾರ ಪಂಚನಾಮೆ ಇತ್ಯಾದಿ ಮಾಡಿ ಮುಂದೆ ಎಷ್ಟೋ ಕಾಲದ ಅನಂತರ ಗಾಡಿ ಕೊಟ್ಟರು. ಆ ಗಾಡಿಯ ಬಗ್ಗೆ ಗಿರಡ್ಡಿಗೆ ಅಪಾರ ಮೋಹವಿತ್ತು. ಅದರ ಮೇಲೆ ಯಾರನ್ನೂ ಹತ್ತಿಸಿಕೊಳ್ಳುತ್ತಿರಲಿಲ್ಲ. ಅದನ್ನು ಅನೇಕ ವರ್ಷಗಳ ವರೆಗೆ ಬಳಸಿ, ಒಂದು ರೆಕಾರ್ಡ್ ಮಾಡಿಬಿಟ್ಟ.

ಇಂಗ್ಲಿಷ್ ಭಾಷೆಗೇ ಒತ್ತು ಕೊಟ್ಟು ಹೈದರಾಬಾದದಲ್ಲಿ ಡಿಪ್ಲೊಮಾ ಮಾಡಿಕೊಂಡ, ಇಂಗ್ಲಂಡದ ಲ್ಯಾಂಕಾಸ್ಟರ್‌ದಲ್ಲಿ ಭಾಷಾಶಾಸ್ತ್ರದಲ್ಲಿ ಎಂ.ಎ. ಮಾಡಿಕೊಂಡ, ಶೈಲೀಶಾಸ್ತ್ರದ ಬಗ್ಗೆ ಪಿಎಚ್.ಡಿ. ಮಾಡಿದ. ನಮ್ಮ ಕಾಲೇಜಿನಿಂದ ಕಲಬುರಗಿ ವಿಶ್ವವಿದ್ಯಾಲಯಕ್ಕೆ, ಅಲ್ಲಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಇಂಗ್ಲಿಷ್ ಯಾತ್ರೆ ಮಾಡುತ್ತ ತನ್ನ ಕನ್ನಡವನ್ನೇ ಪೂಜಿಸಿದ. ಅದರ ಪ್ರೀತಿಯಿಂದಾಗಿ ಬಹಳಷ್ಟು ಹಿಂದೆಯೇ ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಎಂ.ಎ. ಮಾಡಿಕೊಂಡಿದ್ದ.